# ಅಸ್ಪೃಶ್ಯತೆ ಮತ್ತು ಗಾಂಧೀಜಿ

ಕನ್ನಡ ಕವಿ ರಾಘವಾಂಕ ತನ್ನ ಹರಿಶ್ಚಂದ್ರ ಕಾವ್ಯದಲ್ಲಿ ಭಾರತೀಯರೆಲ್ಲರೂ ಉತ್ತರಿಸಲೇ ಬೇಕಾಗಿರುವ ಒಂದು ಪ್ರಶ್ನೆಯನ್ನು ಆತ ಸೃಷ್ಟಿಸಿದ ಮಾತಂಗ ಕನ್ಯೆಯರ ಬಾಯಲ್ಲಿ ಕೇಳಿಸಿದ್ದಾನೆ. ಆ ಕನ್ಯೆಯರು ತಮ್ಮನ್ನು ತಮ್ಮ ಹುಟ್ಟಿನ ಕಾರಣಕ್ಕಾಗಿ ತಿರಸ್ಕರಿಸಿದ ಹರಿಶ್ಚಂದ್ರನನ್ನು ಕೇಳುತ್ತಾರೆ: 'ಹಾಡ ನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ, ಮಾತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ, ರೂಪ ನೆರೆನೋಡಿದ ವಿಲೋಚನಕೆ ಹೊಲೆಯಿಲ್ಲ, ಮೆಯ್ ಮುಡಿಗಳಿಂ ಸುಳಿವ ತಂಗಾಳಿಯಿಂ ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ ನಾಡೆ ಹೊಲೆಯಿಲ್ಲ, ಸೋಂಕಿಂಗೆ ಹೊಲೆಯುಂಟಾಯ್ತೆ? ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಮ ವೊಂದಧಿಕವೇ?' ಕಿವಿ, ನಾಲಗೆ, ಕಣ್ಣು, ಮೂಗು– ಇವು ಯಾವುದಕ್ಕೂ ಮೈಲಿಗೆಯಿಲ್ಲ, ಸ್ಪರ್ಶಕ್ಕೆ ಮಾತ್ರ ಮೈಲಿಗೆಯೆ? ಪಂಚೇಂದ್ರಿಯಗಳಲ್ಲಿ ನಾಲ್ಕು ಕನಿಷ್ಠ, ಒಂದು ಮಾತ್ರ ಶ್ರೇಷ್ಠ ವಾಗುವುದಾದರೂ ಹೇಗೆ? ಅತ್ಯಂತ ಅಮಾನವೀಯವಾಗಿರುವ ಅಸ್ಪೃಶ್ಯತೆಯನ್ನು ಶತಮಾನಗಳಿಂದಲೂ ಅನುಸರಿಸಿ, ಆಚರಣೆಯಲ್ಲಿಟ್ಟುಕೊಂಡು ಬಂದಿರುವ ಭಾರತೀಯ ಸಮಾಜವನ್ನು ಕುರಿತು ಅನೇಕ ಮಂದಿ ಪ್ರಜ್ಞಾವಂತರು ಇಂಥ ಪ್ರಶ್ನೆಗಳನ್ನು ಕೇಳುತ್ತಲೇ ಇದ್ದಾರೆ. ಕರ್ನಾಟಕದಲ್ಲಿಯೇ ನಮ್ಮ ಶಿವಶರಣರೂ, ಪುರಂದರ ಕನಕರಂಥ ದಾಸಶ್ರೇಷ್ಠರೂ ಅಸ್ಪೃಶ್ಯತೆಯ ಕಲಂಕವನ್ನು ಹೊತ್ತಿರುವ ಸಮಾಜವನ್ನು ಹಲವು ಬಾರಿ ಚುಚ್ಚಿ ಎಚ್ಚರಿಸುವ ಕೆಲಸ ಮಾಡಿದ್ದಾರೆ. ವಚನ ಧರ್ಮದ ಪ್ರಕಾರ 'ಮನುಷ್ಯರಲ್ಲಿ ಮೇಲು ಕೀಳು ಎಂಬುದು ಇಲ್ಲವೇ ಇಲ್ಲ' ಎಂಬುದು ಸೈದ್ಧಾಂತಿಕವಾಗಿ ಮಾತ್ರ ಉಳಿಯದೇ ಆಚರಣೆಯಲ್ಲೂ ಇತ್ತು, ಎಂಬುದನ್ನು ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಾದ ಧಾರ್ಮಿಕ ಕ್ರಾಂತಿಯ ಇತಿಹಾಸ ದಾಖಲಿಸಿದೆ.

ಇಪ್ಪತ್ತನೆಯ ಶತಮಾನದಲ್ಲಿ ಅಸ್ಪೃಶ್ಯತೆಯ ಕಳಂಕವನ್ನು ತೊಡೆದು ಹಾಕಲೇಬೇಕೆಂದು ಮನಸ್ಸು, ಮಾತು, ಕ್ರಿಯೆ– ಈ ಮೂರು ನೆಲೆಗಳಿಂದಲೂ ವ್ರತ ನಿಷ್ಠೆಯಿಂದ ದುಡಿದವರು ಮಹಾತ್ಮ ಗಾಂಧಿ, ತಮ್ಮ ಬದುಕಿನ ಉದ್ದಕ್ಕೂ ಮನುಷ್ಯನ ಮೂಲಭೂತ ಹಕ್ಕುಗಳಿಗಾಗಿ ಹೋರಾಡಿದ ಗಾಂಧೀಜಿ, ಭಾರತದ ಸ್ವಾತಂತ್ರ್ಯಕ್ಕೂ, ಅಸ್ಪೃಶ್ಯತಾ ನಿವಾರಣೆಗೂ ಸಮಾನವಾದ ಪ್ರಾಮುಖ್ಯವನ್ನು ನೀಡಿದ್ದರು. ಸ್ವರಾಜ್ಯದ ಸಾಧನೆಯಲ್ಲಿ ಅಸ್ಪೃಶ್ಯತೆಯ ನಿವಾರಣೆ ಅತ್ಯಂತ ಪ್ರಮುಖ ಅಂಶವೆಂದು ಅವರು ದೃಢವಾಗಿ ನಂಬಿದ್ದರು. ಅವರು ಸತ್ಯಾಗ್ರಹ ಆಶ್ರಮಕ್ಕಾಗಿ ರೂಪಿಸಿದ್ದ ಹನ್ನೆರಡು ವ್ರತಗಳಲ್ಲಿ ಅಸ್ಪೃಶ್ಯತಾ ನಿವಾರಣೆಯೂ ಒಂದು.

ಗಾಂಧೀಜಿಯವರ ದೃಷ್ಟಿಯಲ್ಲಿ ಅಸ್ಪೃಶ್ಯತೆ ಎಂಬುದು ಹಿಂದೂ ಸಮಾಜದ ಒಂದು ಅಸಹಜ ಬೆಳವಣಿಗೆ. ಅವರೆನ್ನುತ್ತಿದ್ದರು: 'ನಾವೆಲ್ಲ ನಡೆವುದೊಂದೇ ಭೂಮಿ, ಕುಡಿಯುವುದೊಂದೇ ನೀರು, ಆದರೂ ಉಚ್ಚ ನೀಚ ಭಾವಗಳನ್ನು ನಾವು ಬೆಳೆಸಿಕೊಂಡಿದ್ದೇವೆ. ಯಾರೊಬ್ಬನನ್ನೂ ಅಸ್ಪೃಶ್ಯನೆಂದು ಪರಿಗಣಿಸುವುದಕ್ಕೆ ಹಿಂದೂ ಧರ್ಮದಲ್ಲಿ ಯಾವುದೇ ಆಧಾರವಿಲ್ಲ. ಅಸ್ಪೃಶ್ಯತೆ ನಮ್ಮ ಧರ್ಮಕ್ಕೆ ಹಾಗೂ ದೇಶಕ್ಕೆ ಅಂಟಿಕೊಂಡು ಬಂದಿರುವ ಸಾಮಾಜಿಕ ಪಿಡುಗು... ಅಸ್ಪೃಶ್ಯತೆ ಜೀವಂತವಾಗಿರುವುದಕ್ಕಿಂತ ಹಿಂದೂ ಧರ್ಮ ನಾಶವಾದರೂ ಸರಿಯೇ...'

ಗಾಂಧೀಜೀಯವರು ಅಸ್ಪೃಶ್ಯರೆನ್ನಿಸಿಕೊಂಡವರನ್ನು 'ಅಂತ್ಯಜರು' ಎಂದು ಕರೆಯಲಿಲ್ಲ; 'ಹರಿಜನರು' ಎಂದರು. ಸಂತ ನರಸೀ ಮೆಹತಾರವರು ಸೃಷ್ಟಿಸಿದ ಪದ ಅದು, ಹರಿಜನರೆಂದರೆ ದೇವರಿಗೆ ಪ್ರಿಯರಾದವರು ಎಂದರ್ಥ. 'ಅಸ್ಪೃಶ್ಯರು ಹರಿಜನರು; ಆದರೆ ನಾವು ದುರ್ಜನರು. ನಮ್ಮ ನೈರ್ಮಲ್ಯ ಮತ್ತು ಸುಖಕ್ಕಾಗಿ ಎಷ್ಟೋ ಅಸಹ್ಯಕರ ಹಾಗೂ ಕಷ್ಟಕರ ಕೆಲಸಗಳನ್ನು ಅವರು ಮಾಡುತ್ತಾರೆ. ಆದರೆ ನಾವು ಮಾತ್ರ ಅವರನ್ನು ತುಳಿಯುತ್ತಿದ್ದೇವೆ. ಅವರಲ್ಲಿರುವ ಲೋಪ ದೋಷಗಳಿಗೂ ಸವರ್ಣೀಯರಾದ ನಾವೇ ಕಾರಣ' ಎನ್ನುತ್ತಿದ್ದರು ಗಾಂಧೀಜಿ.

ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಗಾಂಧೀಜಿ ದೇಶದ ಮುಂದೆ ಇಟ್ಟ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಅಸ್ಪೃಶ್ಯತಾ ನಿವಾರಣೆಗೆ ಪ್ರಥಮ ಸ್ಥಾನವಿತ್ತರು. ದಲಿತ ಶೋಷಿತ ಹರಿಜನರ ಜೀವನ ಮಟ್ಟವನ್ನು ಸುಧಾರಿಸಲು ಹರಿಜನ ಸೇವಾ ಸಂಘವನ್ನು ಸ್ಥಾಪಿಸಿದರು. 'ಹರಿಜನ' ಪತ್ರಿಕೆಯ ಮೂಲಕ ಹರಿಜನರ ಸಮಸ್ಯೆಗಳ ಬಗ್ಗೆ ತಮ್ಮ ಚಿಂತನೆಯನ್ನು ಜನತೆಗೆ ತಲುಪಿಸಲು ಯತ್ನಿಸಿದರು. ಬ್ರಿಟಿಷ್ ಸರ್ಕಾರ ಹರಿಜನರಿಗೆ ಪ್ರತ್ಯೇಕ ಚುನಾವಣೆಯನ್ನು ನಡೆಸಿ, ಅವರನ್ನು ಹಿಂದೂ ಸಮಾಜದಿಂದಲೇ ಬೇರ್ಪಡಿಸುವ ಕುಟಿಲಯತ್ನ ಮಾಡಿದಾಗ, ಅದನ್ನು ಪ್ರತಿಭಟಿಸಿ, ಉಪವಾಸ ಪ್ರಾರಂಭಿಸಿದರು, ಹರಿಜನರ ಮಕ್ಕಳಿಗೆ ವಿದ್ಯಾಭ್ಯಾಸದ ಅವಕಾಶ, ಹರಿಜನರಿಗೆ ದೇವಾಲಯ ಮತ್ತಿತರ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶಾವಕಾಶ– ಇತ್ಯಾದಿಗಳ ಮೂಲಕ ಅವರು ಸಮಾಜದ ಮುಖ್ಯವಾಹಿನಿಗೆ ಸೇರಿಕೊಳ್ಳುವಂತೆ ಮಾಡಲು ಸತತವಾಗಿ ಪ್ರಯತ್ನಿಸಿದರು; ಮುಖ್ಯವಾಗಿ ಹರಿಜನರ ಬಗೆಗೆ ಸವರ್ಣೀಯ ಹಿಂದೂಗಳ ಮನಸ್ಸನ್ನು ಪರಿವರ್ತಿಸುವ ದಿಕ್ಕಿನಲ್ಲಿ ಕೆಲಸ ಮಾಡಿದರು.

ಗಾಂಧೀಜಿಯವರ ಆರಾಧ್ಯ ದೈವ 'ರಘುಪತಿ ರಾಘವ ರಾಜಾರಾಮ' ಮಾತ್ರವಾಗಿರಲಿಲ್ಲ; 'ಪತಿತ ಪಾವನ ಸೀತಾರಾಮನೂ' ಆಗಿದ್ದ!

■ ವೈನತೇಯ

# ಮಾತೇ ಮುತ್ತು

★ ಸುಳ್ಳು ಹೇಳುವವನಿಗೆ ಜ್ಞಾಪಕ ಶಕ್ತಿ ಇದ್ದರೆ ಸಾಲದು, ಕಲ್ಪನಾ ಶಕ್ತಿಯೂ ಬೇಕು!

–ಬೀಚಿ

★ ಅದೃಷ್ಟವಶಾತ್ ಬಡವರು ಆಹಾರ ಒದಗಿಸುತ್ತಾರೆ; ಇಲ್ಲವಾದರೆ ಶ್ರೀಮಂತರು ಹಣವನ್ನೇ ತಿನ್ನಬೇಕಾಗಿತ್ತು!

–ರಷ್ಯಾ ಗಾದೆ

★ ಜಗತ್ತಿನ್ಯಾಗ ಖರೆ, ಸುಳ್ಳು ಅಂಬೋವು ಖರೇ ಇರೋದಿಲ್ಲ. ಖರೇ ಹೇಳೋದಂದರ ಒಂದು ಅನುಕೂಲ ಆದರೂ ಇರ್‍ತದ ಅಥವಾ ಅನಾನುಕೂಲ ಆದರೂ ಇರ್‍ತದ.

–ವಿ.ವಾ.ಶಿರವಾಡಕರ

★ ನಾವು ಬೆಳೆಯೋದೆಲ್ಲ ಜನರ ಮಧ್ಯದಲ್ಲಿ. ಅವರಿಂದ ದೂರ ಹೋಗದಂತೆ, ಅವರಿಗೆ ನಿಲುಕುವಂತೆ ಬೆಳೆಯುವುದು– ಬೆಳವಣಿಗೆಯ ನಿಜವಾದ ಲಕ್ಷಣ.

–ಆರ್.ಎಂ.ಹಡಪದ

★ ಸತ್ಯಾನ್ವೇಷಣೆಯಲ್ಲಿ ನನ್ನ ಅನೇಕ ಭಾವನೆಗಳನ್ನು, ವಿಚಾರಗಳನ್ನು ಕೈಬಿಟ್ಟಿದ್ದೇನೆ. ಹೊಸ ಭಾವನೆಗಳನ್ನು, ವಿಚಾರಗಳನ್ನು ಕಲಿತಿದ್ದೇನೆ.

–ಮಹಾತ್ಮ ಗಾಂಧೀಜಿ

★ ಯಾರು ಸತ್ಯವನ್ನೇ ಪ್ರತಿಪಾದಿಸುತ್ತಾ ಹೋಗುತ್ತಾರೋ ಅವರಲ್ಲಿ ಬಚ್ಚಿಡಬೇಕಾದ ಸುಳ್ಳು ಒಂದಿದೆ ಎನಿಸುತ್ತದೆ.

–ಎರಿಕ್ ಹಾಫರ್

★ ನನಗಿಷ್ಟ ಇರುವಷ್ಟು ಸತ್ಯ ಹೇಳುವುದಿಲ್ಲ; ಧೈರ್ಯವಿರುವಷ್ಟು ಮಾತ್ರ ಹೇಳುತ್ತೇನೆ. ವಯಸ್ಸಾದಂತೆಲ್ಲ ಈ ಧೈರ್ಯ ಹೆಚ್ಚುತ್ತದೆ.

–ಮಾಂಟೇಯ್ನ್

★ ಸತ್ಯದ ಸಂರಕ್ಷಣೆಯು ವ್ಯವಹಾರದಲ್ಲಿ ಬರಿಯ ಸತ್ಯದಿಂದಲೇ ಆಗದು. ಅದಕ್ಕಾಗಿ ಅಲ್ಪಸ್ವಲ್ಪ ದಂಡನೀತಿಯನ್ನು ಉಪಯೋಗಿಸಬೇಕಾಗುತ್ತದೆ.

–ಗಳಗನಾಥ

★ ಸಭ್ಯನು ಯೌವನದಲ್ಲಿ ಸ್ತ್ರೀಯರ ವಿಷಯದಲ್ಲೂ, ಮಧ್ಯ ವಯಸ್ಸಿನಲ್ಲಿ ಜಗಳಗಳ ವಿಚಾರದಲ್ಲೂ, ವಯಸ್ಸಾದಾಗ ಹಣದ ವಿಚಾರದಲ್ಲೂ ಜಾಗರೂಕನಾಗಿರುತ್ತಾನೆ.

–ಬೈಬಲ್

★ ಸರ್ಕಾರದ ಬಳಿ ಅಪಾರ ಶಕ್ತಿ ಇರುವುದನ್ನು ಯಾರೂ ಅಲ್ಲಗಳೆಯಲಾರರು. ರಾಕ್ಷಸ ಶಕ್ತಿ ಇರುವುದು ಒಳ್ಳೆಯದು. ಆದರೆ ಅದನ್ನು ರಾಕ್ಷಸನಂತೆ ಉಪಯೋಗಿಸಬಾರದು ಎನ್ನುವ ಎಚ್ಚರ ಹಾಗೂ ನಿಗ್ರಹ ಸರ್ಕಾರಕ್ಕೆ ಹೆಜ್ಜೆ ಹೆಜ್ಜೆಗೂ ಇರಬೇಕು.

–ಪಾಟೀಲ ಪುಟ್ಟಪ್ಪ

★ ಸರ್ಕಾರದ ಯಂತ್ರದಲ್ಲಿ ದೇಶದ ಹಿಡಿತವನ್ನು ಬಿಗಿಪಡಿಸುವುದು ಹೇಗೆಂಬ ಭಾರಿ ದಕ್ಷತೆ ಇದೆಯೇ ಹೊರತು, ಜನತೆಯ ಹಿತ ಕುರಿತ ದಕ್ಷತೆ ಇಲ್ಲ.

–ಜವಾಹರಲಾಲ್ ನೆಹರೂ